

ಬ್ಯಾಂಡೇಜ್ ಕಟ್ಟಿಕೊಂಡು ಕಚೇರಿಗೆ ಬಂದ ಸ್ನೇಹಿತನನ್ನು 'ಇದೇನಯ್ಯಾ ಈ ಸ್ಥಿತಿ?' ಎಂದು ಕೇಳಿದ ಅವನ ಮಿತ್ರ.

'ನಿನ್ನೆ ರಾತ್ರಿ ನನಗೂ ನನ್ನ ಹೆಂಡ್ತಿಗೂ ಜಗಳ ಆಯ್ತು; ಅವಳು ನನ್ನನ್ನು ಚೆನ್ನಾಗಿ ಚಚ್ಚಿದಳು.'

ಆತ– 'ಚಚ್ಚಿಸಿ ಕೊಂಡೆಯಲ್ಲಾ, ನೀನು ಗಂಡನೋ ಅಥವಾ ಇಲಿಯೋ?' ಪ್ರಶ್ನಿಸಿದ.

ಈತ– 'ನಾನು ಗಂಡಸೇ ಕಣಯ್ಯಾ.'

ಆತ– 'ಅದು ಹೇಗೆ ಹೇಳ್ತಿಯಾ?'

ಈತ– 'ನನ್ನ ಹೆಂಡ್ತಿ ಇಲಿಗೆ ಭಾರೀ ಹೆದರ್ತಾಳೆ!'

* * *

ನಗೆ ಭಾಷಣಕಾರ: 'ನಿಮ್ಮನ್ನು ಯಾವ ಮೂರ್ಖನಾದರೂ ನಗಿಸಬಲ್ಲ.'

ಸಭೆಯೊಳಗಿನ ಒಬ್ಬ ವ್ಯಕ್ತಿ: 'ಅದಕ್ಕೇ ಅಲ್ವೆ ಸಾರ್, ನಿಮ್ಮನ್ನು ಕರೆಸಿರೋದು..'

* * *

ಆ ಊರಿಗೆ ಸ್ವಾಮಿಗಳೊಬ್ಬರು ಭೇಟಿ ನೀಡಿದ್ದರು. ಉಪನ್ಯಾಸ ಮಾಡುತ್ತಿದ್ದಾಗ ಒಬ್ಬ ಪ್ರಶ್ನಿಸಿದ.

'ಸ್ವಾಮೀಜಿ, ಹೆಂಡತಿಯನ್ನು ಪಳಗಿಸುವುದು ಹೇಗೆಂದು ದಯವಿಟ್ಟು ತಿಳಿಸಿ'


'ಅಯ್ಯೋ ಮೂರ್ಖ, ಅದು ನನಗೆ ಗೊತ್ತಿದ್ದರೆ ನಾನೇಕೆ ಸನ್ಯಾಸಿಯಾಗಿ ಇರುತ್ತಿದ್ದೆ?' ಎಂದರು ಸ್ವಾಮೀಜಿ.

* * *

ಆತ– 'ಸುಳ್ಳನ್ನು ಪತ್ತೆ ಮಾಡುವ ಯಂತ್ರ ಬಂದಿದೆಯಂತೆ; ನೀನು ನೋಡಿದ್ದೀಯಾ?'

ಈತ– 'ಅಯ್ಯೋ ನೋಡುವುದೇನು? ಈಗಾಗಲೇ ನಾನು ಆ ಯಂತ್ರವನ್ನು ಮದುವೆಯಾಗಿದ್ದೇನೆ!'

★ (ಸಂಗ್ರಹ) ಎ.ಕೆ. ಪಟ್ಟಾಭಿ



ಒಬ್ಬ ಕನ್ನಡಿಗ, ಒಬ್ಬ ಮಲಯಾಳಿ ಮತ್ತೊಬ್ಬ ಪಂಜಾಬಿ– ಮೂವರೂ ಒಂದೇ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನ ಊಟದ ಬುತ್ತಿ ಬಿಚ್ಚಿದರೆ, ಕನ್ನಡಿಗನ ಬಾಕ್ಸ್‌ನಲ್ಲಿ ಮುದ್ದೆ, ಸೊಪ್ಪು ಸಾರು; ಮಲಯಾಳಿಯ ಬಾಕ್ಸ್‌ನಲ್ಲಿ ಒಣ ಮೀನಿನ ಸಾರು, ಕುಚ್ಚಲಕ್ಕಿ ಅನ್ನ ಹಾಗೂ ಪಂಜಾಬಿಯ ಬಾಕ್ಸ್‌ನಲ್ಲಿ ಪರೋಟ, ಆಲೂಗಡ್ಡೆ ಪಲ್ಯ ಇರುತ್ತಿತ್ತು. ಪ್ರತಿದಿನವೂ ಇದನ್ನೇ ತಿಂದು ಮೂವರಿಗೂ ಜೀವನವೇ ಬೇಸರವಾಗಿತ್ತು.

'ನಾಳೆಯೂ ಟಿಫನ್ ಬಾಕ್ಸ್‌ನಲ್ಲಿ ಇದೇ ತರಹದ ಊಟ ಇದ್ದರೆ ಮೂವರೂ ಒಟ್ಟಿಗೇ ಆತ್ಮಹತ್ಯೆ ಮಾಡಿಕೊಳ್ಳೋಣ' ಎಂದು ಮೂವರೂ ನಿರ್ಧರಿಸಿದರು. ಮರುದಿನ ಟಿಫನ್ ಬಾಕ್ಸ್ ತೆರೆದರೆ ಅದೇ ಇತ್ತು. ಸರಿ, ಮೂವರೂ ಆತ್ಮಹತ್ಯೆ ಮಾಡಿಕೊಂಡರು.



ಮೂವರ ಶವಗಳನ್ನೂ ಗೌರವಾರ್ಥ ಕಚೇರಿಯಲ್ಲಿ ಇಡಲಾಯಿತು. ಅಲ್ಲಿಗೆ ಮೂವರ ಪತ್ನಿಯರೂ ಬಂದರು.

'ಅಯ್ಯೋ.. ಒಂದೇ ತರಹದ ಊಟ ತಿಂದು ಬೇಸರವಾಗಿದೆ ಎಂದು ಬಾಯಿಬಿಟ್ಟು ಹೇಳಿದ್ದರೆ ನಾವು ಬೇರೆ ತರಹದ ತಿಂಡಿ ಬಾಕ್ಸ್‌ನಲ್ಲಿ ಹಾಕಿ ಕೊಡುತ್ತಿದ್ದೆವಲ್ಲ...' ಎಂದು ಕನ್ನಡಿಗನ ಮತ್ತು ಮಲಯಾಳಿಯ ಪತ್ನಿಯರು ಗೋಳಾಡಿದರು.

ಪಂಜಾಬಿಯ ಪತ್ನಿ– 'ಅಯ್ಯೋ.. ದಿನವೂ ಅವರ ಊಟವನ್ನು ಅವರೇ ತಯಾರಿಸಿ ಟಿಫನ್ ಬಾಕ್ಸ್‌ಗೆ ಹಾಕುತ್ತಿದ್ದರಲ್ಲ...' ಎಂದು ಪರಿತಪಿಸಿದಳು!

* * *

ಪೆದ್ದು: ಹಿಂದೂ ಧರ್ಮದಲ್ಲಿ ಎರಡನೆ ಮದುವೆಗೆ ಏಕೆ ಅವಕಾಶ ಕೊಟ್ಟಿಲ್ಲ?

ಸಿದ್ದು: ಒಂದೇ ತಪ್ಪಿಗೆ ಎರಡೆರಡು ಸಲ ಶಿಕ್ಷೆ ಅನುಭವಿಸುವುದು ಬೇಡಾಂತ!

★ (ಸಂಗ್ರಹ) ಎಂ.ಎಸ್. ಧರ್ಮೇಂದ್ರ